ಸಿಸಿನಂ. 120/2018
ಪಿಡಬ್ಲ್ಯೂ 2

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 120/2018
ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀ ಶಿವಾನಂದ |
| ತಂದೆಯ ಹೆಸರು | : | ರಾಮಚಂದ್ರ ನಾಯ್ಕ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಸಿ ಹೆಚ್ ಸಿ 860 ಅಂಕೋಲಾ ಪೋಲಿಸ್ ಠಾಣೆ |
| ವಾಸ್ತವ್ಯ | : | ಅಂಕೋಲಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 13-03-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**ಮುಖ್ಯ ವಿಚಾರಣೆ : ದಂಡ ಪ್ರಕ್ರೀಯೆ ಸಂಹಿತೆ ಕಲಂ 299 ರಡಿಯಲ್ಲಿ ಪಿರ್ಯಾದುದಾರರ ಪರವಾಗಿ : ಶ್ರೀ ವಿ ಆರ್ ಬಿ ವಕೀಲರಿಂದ :**

ನಾನು ಮಾರ್ಚ 2018 ರಿಂದ ಅಗಷ್ಟ 2024 ರವರೆಗೆ ಕುಮಟಾ ಆರಕ್ಷಕ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ .

2. ದಿಃ 03-08-2022 ರಂದು ನಮ್ಮ ಪಿಐ ಸಾಹೇಬರ ಆದೇಶದ ಮೇರೆಗೆ ಸಿಸಿ ನಂ . 120/2018 ರಲ್ಲಿ ಆರೋಪಿತನಾದ ಮಹಮ್ಮದ ನವಾಬಜಾನ್ , ಇತನ ವಿರುದ್ಧ ಜಾಹೀರ ಪ್ರಕಟಣಾ ಪಂಚನಾಮೆಯಂತೆ ಆರೋಪಿಯ ಮನೆ ಇರುವ ಹೀರಿಯೂರು ತಾಲೂಕಿಗೆ ಹೋಗಿ ಆತನ ಮಾವನಾದ ಅಬೀಬ್ ಹುಸೇನ್ ಅಬ್ದುಲ್ ವಾಜಿಬ್ ಅವರನ್ನು ಕರೆದುಕೊಂಡು ವಿಚಾರಿಸಿ ಆರೋಪಿ ಕಳೆದ ವರ್ಷಗಳಿಂದ ಮನೆಗೆ ಬಾರದೇ ಇರುವ ಬಗ್ಗೆ ತಿಳಿಸಿರುತ್ತಾರೆ . ಆಗ ಇಬ್ಬರು ಪಂಚರಾದ ಅಬ್ದುಲ್ ಹುಸೇನ್ ಅಬ್ದುಲ್ ವಾಜಿಬ್ ಮತ್ತು ನವಾಬ್ ಅಹಮ್ಮದ್ ರವರನ್ನು ಕರೆದುಕೊಂಡು ಉಘ್ಘೋಷಣಾ ಪ್ರತಿಯನ್ನು ಸಾರ್ವಜನಿಕರಿಗೆ ಅರ್ಥವಾಗುವ ರೀತಿಯಲ್ಲಿ ದೊಡ್ಡದಾಗಿ ಓದಿ ಹೇಳಿ ಬಿದ್ದು ಹೋಗಿರುವ ಆರೋಪಿಯ

ಸಿಸಿನಂ. 120/2018

ಪಿಡಬ್ಲ್ಯೂ: 2

ಹಳೇಯ ಮನೆಯ ಗೋಡೆಗೆ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಉಘೋಷಣಾ ಪ್ರತಿಯನ್ನು ಅಂಟಿಸಿರುತ್ತೇನೆ. ನಂತರ ಸಾರ್ವಜನಿಕರು ಸೇರುವ ಟೀ ಅಂಗಡಿಯ ಕಟ್ಟೆಗೆಯ ಗೋಡೆಗೆ ಉಘೋಷಣಾ ಪ್ರತಿಯನ್ನು ಅಂಟಿಸಿರುತ್ತೇನೆ. ನಂತರ ತಾಲೂಕು ಕಚೇರಿ ಹಿರಿಯೂರು ಇಲ್ಲಿಗೆ ಬಂದು ಉಘೋಷಣಾ ಪ್ರತಿಯನ್ನು ನೋಟಿಸ್ ಬೋರ್ಡ ಮೇಲೆ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಅಂಟಿಸಿರುತ್ತೇನೆ . . ನಂತರ ಹಿರಿಯೂರು ಗ್ರಾಮೀಣ ಪೋಲಿಸ್ ಠಾಣಾ ನೋಟಿಸ್ ಬೋರ್ಡಿಗೆ ಉಘೋಷಣಾ ಪ್ರತಿಯನ್ನು ಅಂಟಿಸಿರುತ್ತೇನೆ .

ಪಂಚನಾಮೆಯನ್ನು ಸಂಜೆ 5-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಸ್ಥಳದಲ್ಲಿ ಮಾಡಿರುತ್ತೇವೆ. ಸಾಕ್ಷಿ ಸ್ಥಳದಲ್ಲಿ ತಯಾರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ನಿಪಿ -7 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -7(ಎ) ಎಂದು ಗುರುತಿಸಲಾಯಿತು. ಪಂಚರ ಸಹಿಯನ್ನು ನಿಪಿ-7(ಬಿ) ಮತ್ತು 7(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರೊಕ್ಲಮೇಶನ್ ವರದಿಯನ್ನು ನೋಡಿ ಗುರುತಿಸಿದ್ದು ನಿಪಿ-8 ಎಂದು , ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.